ಕರ್ನಾಟಕ ಸರ್ಕಾರ

ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿದ ನಡವಳಿಗಳು

20

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ.

ಉಲ್ಲೇಖ: 1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011, ದಿನಾಂಕ:06.05.2017.

2. ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ದಿನಾಂಕ 01.01.2006. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ;ನಿಮಮಇ/ಜೇಷ್ಠತ/ಬೋಧಕ/7/06-07 ದಿನಾಂಕ:18.12.2006.

3. ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ದಿನಾಂಕ 01.01.2013. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶಸಂಖ್ಯೆ; ನಿಮಅಇ/ ಜೇಷ್ಠತ /ಬೋಧಕ/17/2012-13 ದಿನಾಂಕ:22.09.2014.

4 ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ದಿನಾಂಕ 01.01.2015. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶಸಂಖ್ಯೆ; ನಿಮಅಇ/ ಜೇಷ್ಠತ /ವೃಬೋ/29/2014-15 ದಿನಾಂಕ:24.04.2015.

5. ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ದಿನಾಂಕ 01.01.2016. ರಂದಿನಂತಿನ ಜೇಷ್ಠತಾ ಪಟ್ಟಿ ಆದೇಶಸಂಖ್ಯೆ; ಮಮಅಇ/ ಜೇಷ್ಠತ /ವೃಬೋ/15/2016-17 ದಿನಾಂಕ:23.09.2016.

ಪ್ರಸ್ತಾವನೆ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು **"Karnataka Determination of Seniority of Govt servants promoted on the basis of Reservation Act 2002"** ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಆಧಿಕಾರಾತೀತ (**ultra vires**) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ. ಪುನರ್‌ಪರಿಶೀಲನೆ ಕಾರ್ಯ ಕೈಗೊಳ್ಳಲು ಇಲಾಖೆಯಲ್ಲಿ ಈ ಹಿಂದೆ ಪ್ರಕಟಿಸಲಾದ ಮತ್ತು ಲಭ್ಯವಿರುವ ಉಲ್ಲೇಖ (2) ರಿಂದ (5)ರ ಅಂತಿಮ ಜ್ಯೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಿ, ವೃತ್ತಿ ಬೋಧಕರು/ಸಹಾಯಕ ವೃತ್ತಿ ಬೋಧಕರು/ಮುಖ್ಯ ವೃತ್ತಿ ಬೋಧಕರು ವೃಂದದ ನೌಕರರ ಜ್ಯೇಷ್ಠತೆಯನ್ನು ಪುನರ್‌ಪರಿಶೀಲಿಸಿ, ಅನುಬಂಧ-1